

ಶೀತಲೀಕರಣ ಕೇಂದ್ರಗಳು, ದೊಡ್ಡ ದೊಡ್ಡ ಮಿಲ್ಲುಗಳಿಗೆ ಲಕ್ಷಗಟ್ಟಲೆ ಸಾಲ ಪಡೆದ ಸ್ಥಿತಿವಂತ ರೈತರು ಮರುಪಾವತಿಯಲ್ಲಿ ಮೀನ ಮೇಷ ಎಣಿಸುತ್ತಿದ್ದಾರೆ. ಕಂತು ಕೇಳಲು ಬ್ಯಾಂಕಿನವರು ಅವರ ಮನೆಬಾಗಿಲಿಗೆ ಎಡತಾಕಿದರೂ ಪ್ರಯೋಜನವಾಗದ ಸಂದರ್ಭಗಳಿವೆ.

ಸಾಲ ಕೊಳ್ಳುವಾಗ ಇರುವ ನಿಯತ್ತು ಅದನ್ನು ತೀರಿಸುವ ಕಾಲದಲ್ಲಿ ಸೋರಿಹೋಗುತ್ತದೆ. ಕೇಳಿದರೆ, 'ಸಾಲ ಮನ್ನಾದಲ್ಲಿ ನಮ್ಮದೂ ಆಗುತ್ತದೆ ಬಿಡಿ' ಎನ್ನುವ ಉಡಾಫೆಯ ಮಾತು. ಒಟ್ಟಾರೆ ಎಲ್ಲರೂ ಸಾಲ ಮನ್ನಾ ಎಂಬ ಮರೀಚಿಕೆಯ ಬೆನ್ನು ಹತ್ತಿದವರೇ. ಮುಂಚಿನ ಎಲ್ಲಾ ಸಾಲ ಮನ್ನಾದ ಸಂದರ್ಭಗಳಲ್ಲಿ ನಿಜವಾಗಿಯೂ ಮೂರ್ಖನಾದವನು ಪ್ರಾಮಾಣಿಕ ರೈತ. ಮರ್ಯಾದೆಗೆ ಅಂಜಿಯೋ, ಇದ್ದುದರಲ್ಲಿ ಕಟ್ಟಿಬಿಟ್ಟರಾಯಿತು ಎನ್ನುವ ನಿಯತ್ತಿನಲ್ಲಿ ನಡೆದ ರೈತನಿಗೆ ಸಾಲ ಮನ್ನಾದಲ್ಲಿ ಚಿಕ್ಕಾಸೂ ಸಿಗಲಿಲ್ಲ. ಅಲ್ಲಿ ಸಾಲ ಕಟ್ಟಲಾರದವರಿಗೆ ಮಣೆ ಹಾಕಲಾಯಿತೇ ಹೊರತು, ನಿಯತ್ತಿನಿಂದ ದುಡಿದು ಕಟ್ಟಿದ ರೈತನಿಗಲ್ಲ. ಮುಂದೆ ಪ್ರಾಮಾಣಿಕ ರೈತರೂ ಉಳಿದವರ ಹಾದಿ ಹಿಡಿದರೆ ಅಚ್ಚರಿಯಿಲ್ಲ.

## ಮಳೆಯಾಧಾರಿತ ಕೃಷಿಕ

ರಾಜ್ಯದ ಹೆಚ್ಚಿನೆಡೆ ಸಂಖ್ಯೆಯಲ್ಲಿ ಮಳೆಯಾಧಾರಿತ ಬೆಳೆಯನ್ನು ನಂಬಿರುವ ಸಣ್ಣ ರೈತರೇ ಜಾಸ್ತಿ. ವರ್ಷಕ್ಕೊಂದು ಬೆಳೆ ಕಾಣುವ ಇವರ ಹೆಗಲ ಮೇಲೆ ಲಕ್ಷಗಟ್ಟಲೆ ಸಾಲದ ಹೊರೆಯಿದೆ. ಈ ಹೊರೆಯನ್ನು ಇವರು ಖಂಡಿತಾ ಇಳಿಸಲು ಸಾಧ್ಯವಾಗದ ಸ್ಥಿತಿಯಿದೆ. ಮಳೆ, ಬೆಳೆ ಬರಲಿ ಬಿಡಲಿ, ನಿಯಮದ ಪ್ರಕಾರ ಬೆಳೆಸಾಲ ವರ್ಷವೂ ನವೀಕರಣಗೊಳ್ಳುತ್ತ ಗರಿಷ್ಠ ಮಿತಿಯ ಹಂತಕ್ಕೆ ಬಂದು ನಿಲ್ಲುತ್ತದೆ. ಅಲ್ಲಿಂದ ಮುಂದೆ ಹೆಚ್ಚಿನ ಬೆಳೆಸಾಲ ಇಲ್ಲ. ಇಲ್ಲ ಅಂದಾಕ್ಷಣ ರೈತ ಬ್ಯಾಂಕಿಗೂ ಬರುವುದಿಲ್ಲ. ಈ ನಡುವೆ ಮಳೆ ಬೆಳೆಯಿಲ್ಲದಿದ್ದರೆ ಕೆಲಸ ಹುಡುಕಿಕೊಂಡು ಗುಳೆ ಹೋಗುವ ರೈತ ಸಮುದಾಯ ಹೈದರಾಬಾದ್ ಕರ್ನಾಟಕ ಭಾಗದಲ್ಲಿದೆ.

ಕೃಷಿ ಸಾಲ ಅನುತ್ಪಾದಿತ ಸಾಲವಾಗಬಾರದೆನ್ನುವ ನಿಟ್ಟಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳು ಪಾಲಿಸುತ್ತಿರುವ ನಿಯಮಗಳು, ಚಲಾವಣೆಯಲ್ಲಿರುವ ಕಾರ್ಯತಂತ್ರಗಳು ಮುಂದಿನ ದಿನಗಳಲ್ಲಿ ದೊಡ್ಡ ಸವಾಲನ್ನು ತಂದೊಡ್ಡಲಿವೆ. ಮೂರು ವರ್ಷಗಳ ಹಿಂದೆ ತೆಲಂಗಾಣ ರಾಜ್ಯ ಉದಯಿಸುವ ಸಂದರ್ಭದಲ್ಲಿ ಅಲ್ಲಿನ ಈಗಿನ ಮುಖ್ಯಮಂತ್ರಿಯವರು 1 ಲಕ್ಷ ರೂಪಾಯಿವರೆಗಿನ ಕೃಷಿಸಾಲವನ್ನು ಮನ್ನಾ ಮಾಡುವ ಘೋಷಣೆ ಮಾಡಿದರು. ಆದರೆ ಅದಕ್ಕೆ ಬೇಕಾಗುವಷ್ಟು ಆರ್ಥಿಕ ಸಂಪನ್ಮೂಲ ಸರಕಾರದ ಬಳಿ ಇರಲಿಲ್ಲ. ಭಾರತೀಯ ರಿಸರ್ವ್ ಬ್ಯಾಂಕ್ ಆ ಸಂದರ್ಭದಲ್ಲಿ ಸಾಲ ಮನ್ನಾದ ಭರವಸೆಗಳಿಗೆ ಸರಕಾರವೇ ಹೊಣೆ ಎಂಬ ಆದೇಶವನ್ನು ಹೊರಡಿಸಿತು.

ಆಗ ಸರಕಾರ 1 ಲಕ್ಷ ರೂಪಾಯಿವರೆಗಿನ ಕೃಷಿಸಾಲ ಮನ್ನಾದ ಮಿತಿಯನ್ನು ಮುಂದಿನ ನಾಲ್ಕು ವರ್ಷಗಳಿಗೆ ಸಮನಾಗಿ ಹಂಚಿ ಕೈತೊಳೆದುಕೊಂಡಿತು. ಆದರೆ ಸರಕಾರ ಬಿಡುಗಡೆ ಮಾಡಿದ ಸಾಲ ಮನ್ನಾದ ಮೊತ್ತಕ್ಕಿಂತಲೂ ಹೆಚ್ಚಿನ ಸಾಲವನ್ನು ರೈತರಿಗೆ ಕೊಡಬೇಕೆನ್ನುವ ಷರತ್ತನ್ನು ಬೆಳೆಸಾಲದ ನಿಯಮಗಳನ್ನು ಮೀರಿ ವಿಧಿಸಿತು. ಇದರಿಂದಾಗಿ ಸಾಲದ ಮಿತಿ ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ.

## ಪರಿಹಾರ ಏನು?

ರೈತರ ಸಮಸ್ಯೆಗಳಿಗೆ ಸಾಲ ಮನ್ನಾ ತಾತ್ಕಾಲಿಕ ಪರಿಹಾರದಂತೆ ಕಂಡರೂ ಅದರ ಅನುಷ್ಠಾನದಲ್ಲಿ ನೂರೆಂಟು ತೊಡಕುಗಳಿವೆ. ಯಾವೆಲ್ಲ ಸಾಲಗಳನ್ನು ಮನ್ನಾ ಮಾಡಬೇಕು ಎನ್ನುವುದು ದೊಡ್ಡ ಸವಾಲು. ಅಲ್ಲದೆ ಸಾಲ ಮನ್ನಾ ನಂತರದ ಪರಿಣಾಮಗಳನ್ನು ಈಗಲೇ ಊಹಿಸುವುದು ಕಷ್ಟ.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಮುಂದಿನ ದಿನಗಳಲ್ಲಿ ಕೃಷಿಯನ್ನು ಒಂದು ಉದ್ಯಮವಾಗಿ ಪರಿಗಣಿಸಿ ಹೆಚ್ಚಿನ ಅನುದಾನ ನೀಡಬೇಕು. ಕೃಷಿ ಕ್ಷೇತ್ರಕ್ಕೆ ಹೂಡಿದ ಹಣ ಸದುಪಯೋಗವಾಗಿದೆಯೇ ಇಲ್ಲವೇ ಎನ್ನುವುದನ್ನು ಗಮನಿಸಬೇಕು. ಹಾಕಿದ ಹಣ ಪೋಲಾಗದಂತೆ, ವ್ಯರ್ಥವಾಗದಂತೆ ಕೈಗೆಟಕುವ ಅಂತರದಲ್ಲಿ ಸಕಾಲಿಕ ಮಾರ್ಗದರ್ಶನ, ಸಹಾಯ ಸಿಗುವಂತಿರಬೇಕು.

ಈಗಿರುವ ಸಾಲದ ಮೇಲಿನ ಬಡ್ಡಿಯಲ್ಲಿ ಸ್ವಲ್ಪಾಂಶವನ್ನು ರಿಯಾಯಿತಿ ಮಾಡಿಯೋ ಇಲ್ಲಾ ಅನುಕೂಲ ಇರುವ ರೈತರು ಒಂದೇ ಕಂತಿನಲ್ಲಿ ಸಾಲ ಕಟ್ಟಲು ಮುಂದೆ ಬಂದರೆ ಅವರಿಗೆ ಬಡ್ಡಿಯಲ್ಲಿ ಹೆಚ್ಚಿನ ರಿಯಾಯಿತಿಯನ್ನು ನೀಡುವ ಒಂದು ಸಲದ ರಾಜಿಸೂತ್ರವನ್ನು ಘೋಷಿಸಿಯೋ ಸಾಲ ಮನ್ನಾದ ಹಣವನ್ನು ಸದುಪಯೋಗ ಪಡಿಸಿಕೊಳ್ಳಬಹುದು.

ಪ್ರಗತಿಶೀಲ ರೈತನ ಏರುತ್ತಿರುವ ಸಾಲವನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ಪರ್ಯಾಯ ಯೋಜನೆಗಳನ್ನು ಸರಕಾರ ರೂಪಿಸಬೇಕು. ರೈತನಿಗೂ ಹೊರೆಯಾಗದೆ, ಸರಕಾರಕ್ಕೂ ಭಾರವಾಗದೆ ಹಂತ ಹಂತವಾಗಿ ಸಾಗುವ ಈ ಪ್ರಕ್ರಿಯೆ ರೈತನಲ್ಲಿ ಆರ್ಥಿಕ ಶಿಸ್ತನ್ನು ತರಬಲ್ಲುದು.

ರೈತರು ಬೆಳೆದ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ ಭರವಸೆಯನ್ನು ಸರಕಾರ ಕೊಡಬೇಕು. ಆಗ ರೈತ ಪಟ್ಟ ಶ್ರಮಕ್ಕೆ ಕಿಂಚಿತ್ತಾದರೂ ಪ್ರತಿಫಲ ಸಿಗುವುದರ ಜೊತೆಗೆ ಆತ ಬೀದಿಗೆ ಬೀಳುವುದು ತಪ್ಪುತ್ತದೆ. ಸ್ಥಿತಿವಂತ ರೈತರಿಗೆ ಸಾಲ ಮನ್ನಾ ಸೌಲಭ್ಯದ ಲಾಭ ಸಿಗದಂತಹ ಮಾನದಂಡವನ್ನು ರೂಪಿಸಿ, ಅವರ ಸಾಲ ವಸೂಲಿಯಲ್ಲಿ ಕಟ್ಟುನಿಟ್ಟಿನ ಕ್ರಮ ಜಾರಿಯಾಗುವಂತೆ ನೋಡಿಕೊಳ್ಳಬೇಕು. ಸಾಲ ಮನ್ನಾ ಹಣವನ್ನು ನೇರವಾಗಿ ರೈತರ ಖಾತೆಗಳಿಗೆ ವರ್ಗಾಯಿಸದೆ, ಬ್ಯಾಂಕಿಗೆ ಹಣವನ್ನು ರವಾನಿಸಿ ಸಾಲದ ಮೊತ್ತವನ್ನು ಕಡಿಮೆ ಮಾಡಬೇಕು.